# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಯುಎ1/416/2017-2018

ದಿನಾಂಕ: 04-04-2018

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ಘಟಕೋತ್ಸವದ ಪೂರ್ವಭಾವಿಯಾಗಿ ದಿನಾಂಕ 12-03-2018ರಂದು ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

-:-:-

ವಿಶ್ವವಿದ್ಯಾನಿಲಯದ ತೊಂಭತ್ತೆಂಟನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ, ದಿನಾಂಕ 12-03-2018 ರಂದು ಬೆಳಗ್ಗೆ 08.30 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡಾವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ. ನಡಾವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡಾವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡಾವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 25-04-2018ರ ಒಳಗಾಗಿ, ವಿಶೇಷಾಧಿಕಾರಿಗಳು(ಪ್ರಾಧಿಕಾರ), ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

4/4/18

ವಿಶೇಷಾಧಿಕಾರಿಗಳು (ಪ್ರಾಧಿಕಾರ)

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು- ಘನತೆವೆತ್ತ ರಾಜ್ಯಪಾಲರ ಗಮನಕ್ಕೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ, ಮಾನಸಗಂಗೋತ್ರಿ, ಮೈಸೂರು
7. ಎಲ್ಲಾ ಉಪಕುಲಸಚಿವರು/ ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC forwarding letter

# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 12-03-2018ರಂದು ಬೆಳಿಗ್ಗೆ 8.30 ಗಂಟೆಗೆ ಶೈಕ್ಷಣಿಕ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 98ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡಾವಳಿ.

ಹಾಜರಿದ್ದ ಸದಸ್ಯರು:

1. ಪ್ರೊ. ಸಿ.ಬಸವರಾಜು, ಕುಲಪತಿಗಳು(ಪ್ರಭಾರ) ... ಅಧ್ಯಕ್ಷರು
2. ಡಾ.ಎಂ.ಸಿ.ನಟರಾಜ ... ಸದಸ್ಯರು
3. ಶ್ರೀಮತಿ ಎಂ.ಎನ್ ಪೊನ್ನಮ್ಮ ... ಸದಸ್ಯರು
4. ಶ್ರೀ.ಪುಷ್ಪಕುಮಾರ್ ಎಂ.ವಿ ... ಸದಸ್ಯರು
5. ಶ್ರೀ.ಕುಮಾರ್ ... ಸದಸ್ಯರು
6. ಶ್ರೀ.ಬಿ.ಇ.ಜಗದೀಶ್ ... ಸದಸ್ಯರು
7. ಶ್ರೀ.ಕೆ.ಟಿ.ಅಪ್ಪಾಜಪ್ಪ ... ಸದಸ್ಯರು
8. ಶ್ರೀ.ಕೆ.ಸೋಮಶೇಖರ್ ... ಸದಸ್ಯರು
9. ಡಾ. ರಾಜಗೋಪಾಲ್ ... ಸದಸ್ಯರು
10. ಪ್ರೊ.ಜಿ.ವೆಂಕಟೇಶ್ ಕುಮಾರ್ ... ಸದಸ್ಯರು
11. ಪ್ರೊ.ಬಿ.ಪಿ.ಮಹೇಶ್ ಚಂದ್ರ ಗುರು ... ಸದಸ್ಯರು
12. ಪ್ರೊ. ಭಾರತಿ ಪಿ ಸಾಲಿಮಠ್ ... ಸದಸ್ಯರು
13. ಪ್ರೊ.ಆಯಿಷ ಎಂ ಶೆರೀಫ್ ... ಸದಸ್ಯರು
14. ಡಾ. ನಿಂಗಮ್ಮ ಸಿ ಬೆಟ್ಸೂರ್ ... ಸದಸ್ಯರು
15. ಶ್ರೀ. ರಘು ಸಿ.ಎಸ್ ... ಸದಸ್ಯರು
16. ಶ್ರೀ.ಬೆಳವಾಡಿ ಪ್ರಭಾಕರ್ ... ಸದಸ್ಯರು
17. ಡಾ.ಆರ್.ಟಿ.ಡಿ.ರಮೇಶ್ ಗಾಂಧಿ, ಗ್ರಂಥಪಾಲಕರು ... ಸದಸ್ಯರು
18. ಡಾ.ಸುರೇಶ್ ಬೆಂಜಮಿನ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ ... ಸದಸ್ಯರು
19. ಪ್ರೊ. ಯಶವಂತ ಡೋಂಗ್ರೆ, ನಿರ್ದೇಶಕರು, ಪಿ.ಎಂ.ಇ.ಬಿ ... ಸದಸ್ಯರು
20. ಡಾ.ಎಸ್.ಶ್ರೀಕಂಠಸ್ವಾಮಿ ನಿರ್ದೇಶಕರು, ಸಿ.ಡಿ.ಸಿ ... ಸದಸ್ಯರು
21. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
22. ಪ್ರೊ. ಜೆ.ಸೋಮಶೇಖರ್, ಕುಲಸಚಿವ(ಪರೀಕ್ಷಾಂಗ) ... ಸದಸ್ಯರು
23. ಪ್ರೊ.ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು ... ಸದಸ್ಯರು
24. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ ಕುಲಸಚಿವರು ಸದಸ್ಯ ಕಾರ್ಯದರ್ಶಿ

ವಿಶೇಷ ಅಹ್ವಾನಿತರು:

1. ಪ್ರೊ. ಟಿ.ಕೆ.ಉಮೇಶ್
2. ಪ್ರೊ.ಎನ್.ಉಷಾರಾಣಿ

ಗೈರುಹಾಜರಾದ ಸದಸ್ಯರು:

1. ಆಯುಕ್ತರು, ಕಾಲೇಜು ಶಿಕ್ಷಣ, ಕರ್ನಾಟಕ ಸರ್ಕಾರ
2. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಕರ್ನಾಟಕ ಸರ್ಕಾರ
3. ಶ್ರೀ ರಾಮಚಂದ್ರೇಗೌಡ, ಎಂಎಲ್‌ಸಿ
4. ಶ್ರೀ ಅಪ್ಪಾಜಿಗೌಡ, ಎಂಎಲ್‌ಸಿ

5. ಶ್ರೀ.ಜಿ.ಅಶ್ವಥ ನಾರಾಯಣ
6. ಶ್ರೀ.ಟಿ.ರಾಮಕೃಷ್ಣ
7. ಪ್ರೊ.ಎಸ್.ಎಲ್.ಬೆಳಗಲಿ
8. ಪ್ರೊ.ಬಿ.ಕೆ.ತುಳಸಿಮಾಲ
9. ಶ್ರೀ.ನಾಗೇಶ್ ಕರಿಯಪ್ಪ

ಮೊದಲಿಗೆ ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯದ 98ನೇ ಘಟಿಕೋತ್ಸವದ ಪೂರ್ವಭಾವಿಯಾಗಿ ಸಮಾವೇಶಗೊಂಡ ಶಿಕ್ಷಣ ಮಂಡಳಿಯ ವಿಶೇಷ ಸಭೆಗೆ ಎಲ್ಲಾ ಮಾನ್ಯ ಸದಸ್ಯರಿಗೂ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು.

ಮೈಸೂರು ವಿಶ್ವವಿದ್ಯಾನಿಲಯದ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಹಾಗೂ ಕರ್ನಾಟಕ ಸರ್ಕಾರದ ನಿವೃತ್ತ ಲೋಕಾಯುಕ್ತರಾದ ಜಸ್ಟಿಸ್ ಸಂತೋಷ್ ಹೆಗ್ಡೆರವರು ಘಟಿಕೋತ್ಸವದ ಭಾಷಣ ಮಾಡಲಿದ್ದಾರೆ. ಘಟಿಕೋತ್ಸವ ಪೂರ್ಣಗೊಂಡ ನಂತರ ಮಧ್ಯಾಹ್ನ 3.00 ಗಂಟೆಗೆ ಪಿಹೆಚ್.ಡಿ ಪದವೀಧರರಿಗೆ ಪಿಹೆಚ್.ಡಿ ಪದವಿ ಪ್ರದಾನ ಸಮಾರಂಭವನ್ನು ಹಮ್ಮಿಕೊಂಡಿದ್ದು, ಎಲ್ಲಾ ಮಾನ್ಯ ಸದಸ್ಯರು ಹಾಜರಾಗಿ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಕೋರಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

<u>ಕಾರ್ಯಸೂಚಿ:</u>

**ದಿನಾಂಕ: 12.03.2018 ರಂದು ಸೋಮವಾರ ನಡೆಯಲಿರುವ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ಹಾಜರಿ ಮತ್ತು ಗೈರು ಹಾಜರಿಯಲ್ಲಿ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಅಂಗೀಕರಿಸುವ ಬಗ್ಗೆ.**

ಮಾನ್ಯ ಕುಲಪತಿಗಳು, ವಿವಿಧ ನಿಕಾಯಗಳ ಡೀನರುಗಳನ್ನು, ಅವರವರ ನಿಕಾಯಕ್ಕೆ ಸಂಬಂಧಿಸಿದ ವಿವಿಧ ಪದವಿಗಳನ್ನು ಪ್ರದಾನ ಮಾಡುವ ಸಲುವಾಗಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸುವಂತೆ ಕೋರಿದರು.

"ಕಲಾ/ವಾಣಿಜ್ಯ/ಶಿಕ್ಷಣ/ಕಾನೂನು/ವಿಜ್ಞಾನ ಮತ್ತು ತಂತ್ರಜ್ಞಾನ" ನಿಕಾಯಗಳ ಡೀನರುಗಳು ಅವರವರ ವ್ಯಾಪ್ತಿಗೆ ಬರುವ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದರು.

ತೀರ್ಮಾನ: ಕಲಾ/ವಾಣಿಜ್ಯ/ಶಿಕ್ಷಣ/ಕಾನೂನು/ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಗಳಿಗೆ ಸಂಬಂಧಿಸಿದಂತೆ ಡೀನರುಗಳು ಮಂಡಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸರ್ವಾನುಮತದಿಂದ ಒಪ್ಪಿ ಶಿಫಾರಸ್ಸು ಮಾಡಲಾಯಿತು.

ಅಂತಿಮವಾಗಿ, ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ | ಕುಲಪತಿ ಹಾಗೂ ಅಧ್ಯಕ್ಷರು |